**ಸಾಕ್ಷಿಯನ್ನು ದಿಃ 03-12-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ- 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದಃ**

ನಾನು 9 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನ್ನ ಗಂಡ ಎ ಎಸ್ ಐ ಆಗಿ ಹೊಸಮನೆ ಪೋಲಿಸ್ ಠಾಣೆಯಲ್ಲಿ ಕೆಲಸ ಮಾಡುತ್ತಾರೆ. 2011 ರಿಂದ 2018 ರವರೆಗೆ ನನ್ನ ಗಂಡ ಮಾಳೂರು ಪೋಲಿಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಆಗ ನಾವು ಶಿವಮೊಗ್ಗದಲ್ಲಿ ಮನೆ ಮಾಡಿದ್ದೆವು.

ನನ್ನ ತಾಯಿ ಹೇಮ್ಲಿಬಾಯಿ ರವರಿಗೆ 2011 ರಲ್ಲಿ ಪಾರ್ಶ್ವವಾಯು ಆಗಿತ್ತು. ನನ್ನ ತಾಯಿ ಭಧ್ರಾವತಿಯಲ್ಲಿಯೇ ವಾಸವಿದ್ದರು ಎಂದರೆ ಸರಿ. ಆಕೆ 2018 ರಲ್ಲಿ ತೀರಿಕೊಂಡರು ಎಂದರೆ ಸರಿ. 2011 ರಿಂದ 2018 ರವರೆಗೆ 1 ಮತ್ತು 2 ನೇ ಪ್ರತಿವಾದಿಯರೇ ನನ್ನ ತಾಯಿಯನ್ನು ನೋಡಿಕೊಂಡಿದ್ದರು ಎನ್ನುವುದು ಸರಿಯಲ್ಲ. ಪಾರ್ಶ್ವವಾಯು ಆಗಿದ್ದ ನನ್ನ ತಾಯಿ ಕಛೇರಿಗೆ ಹೋಗಿ ಹಾಜರಾತಿಗೆ ಸಹಿ ಹಾಕಲು ಅವರ ಮೊಮ್ಮಗ ಸಂತೋಷ ಸಹಾಯ ಮಾಡುತ್ತಿದ್ದ ಎಂದರೆ ಸರಿ. ಪಾರ್ಶ್ವವಾಯು ಆದಾಗಿನಿಂದ ಸ್ವಯಂ ನಿವೃತ್ತಿ ಹೊಂದುವವರೆಗೂ ನನ್ನ ತಾಯಿಯ ಮಾನಸಿಕ ಆರೋಗ್ಯ ಚನ್ನಾಗಿತ್ತು ಎನ್ನುವುದು ಸರಿಯಲ್ಲ.

1 ನೇ ಪ್ರತಿವಾದಿ ಹುಟ್ಟಿದಾಗಿನಿಂದಲೂ ನನ್ನ ತಾಯಿ ಜೊತೆಯಲ್ಲಿಯೇ ಇದ್ದರು ಎನ್ನುವುದು ಸರಿಯಲ್ಲ. ಅದೇ ಕಾರಣದಿಂದ 1 ನೇ ಪ್ರತಿವಾದಿಯ ಹೆಸರು ನನ್ನ ತಾಯಿಗೆ ಸಂಬಂಧಪಟ್ಟ ಪಡಿತರ ಚೀಟಿಯಲ್ಲಿ ನಮೂದಾಗಿತ್ತು ಎನ್ನುವುದು ಸರಿಯಲ್ಲ. ಅದೇ ರೀತಿ ನನ್ನ ತಾಯಿ ಬ್ಯಾಂಕಿನಲ್ಲಿ ಇಟ್ಟಿದ್ದ ನಿಶ್ಚಿತ ಠೇವಣಿಗೆ 1 ನೇ ಪ್ರತಿವಾದಿಗೆ ನಾಮಿನಿ ಮಾಡಿದ್ದರು ಎನ್ನುವುದು ಸರಿಯಲ್ಲ. ಪಾರ್ಶ್ವವಾಯು ಆದಾಗಿನಿಂದ ನನ್ನ ತಾಯಿ 1 ನೇ ಪ್ರತಿವಾದಿಯ ಮನೆಯಲ್ಲಿಯೇ ಇದ್ದರು 1 ನೇ ಪ್ರತಿವಾದಿ ಹಾಗೂ ಆಕೆಯ ಮನೆಯವರು ನನ್ನ ತಾಯಿಯ ಆರೈಕೆ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಯ ಮನೆಯಿಂದಲೇ ನನ್ನ ತಾಯಿ ಕೆಲಸಕ್ಕೆ ಹೋಗುತ್ತಿದ್ದರು ಮತ್ತು ಅಲ್ಲಿಯೇ ತೀರಿಕೊಂಡರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ನನ್ನ ತಾಯಿ ಭದ್ರಾವತಿಯಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡು ಒಬ್ಬರೇ ವಾಸವಿದ್ದರು ಎನ್ನುತ್ತಾರೆ. 2011 ರಿಂದ 2018 ರ ಅವಧಿಯಲ್ಲಿ ನಾವು ಶಿವಮೊಗ್ಗದಲ್ಲಿ ಇದ್ದೆವು ಮತ್ತು ನನ್ನ ತಾಯಿ ಭದ್ರಾವತಿಯಲ್ಲಿ ಇದ್ದರು ಎಂದರೆ ಸಾಕ್ಷಿ ಪಾರ್ಶ್ವವಾಯು ಆಗಿದ್ದರಿಂದ ನಮ್ಮ ತಾಯಿ ನನ್ನ ಜೊತೆ ನಮ್ಮ ಮನೆಯಲ್ಲಿ ಇದ್ದರು ಎನ್ನುತ್ತಾರೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ತಾಯಿಯ ಆಗು-ಹೋಗುಗಳನ್ನು ಮತ್ತು ಆರೋಗ್ಯವನ್ನು 1 ನೇ ಪ್ರತಿವಾದಿ ನೋಡಿಕೊಂಡಿದ್ದರಿಂದಲೇ ನಿಶ್ಚಿತ ಠೇವಣಿಗೆ ಆಕೆಯನ್ನು ನಾಮಿನಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ನನ್ನ ತಾಯಿ 1 ನೇ ಪ್ರತಿವಾದಿಯ ಮದುವೆ ಖರ್ಚಿಗೆಂದು ನಿಶ್ಚಿತ ಠೇವಣಿಗೆ ಹಣ ಇಟ್ಟಿದ್ದರು ಎನ್ನುವುದು ಸರಿಯಲ್ಲ. ನನ್ನ ತಾಯಿಯ ಉಳಿತಾಯ ಖಾತೆಯಲ್ಲಿದ್ದ ಹಣವನ್ನು 1 ನೇ ಪ್ರತಿವಾದಿ ಆಕೆಯ ಆರೈಕೆಗೆ ಮತ್ತು ಔಷದೋಪಚಾರಕ್ಕೆ ಬಳಸುತ್ತಿದ್ದಳು ಎನ್ನುವುದು ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಹೇಳಿರುವುದೆಲ್ಲಾ ಸುಳ್ಳು ಎನ್ನುವುದು ಸರಿಯಲ್ಲ. ದಾವೆಯಲ್ಲಿ ಕೇಳಿರುವ ರೀತಿಯಲ್ಲಿ ಪರಿಹಾರ ಪಡೆಯಲು ಅರ್ಹಳಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ- 4 ರಿಂದ 6 ನೇ ಪ್ರತಿವಾದಿರು ಮತ್ತು ವಕೀಲರು ಗೈರು ಹಾಜರಿದ್ದು, ನ್ಯಾಯದ ದೃಷ್ಟಿಯಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

c/c. 1 ನೇ ಹೆಚ್ಚುವರಿ ಪ್ರ.ದ.ನ್ಯಾದಂ. ಭದ್ರಾವತಿ

**ಪಾಟೀ ಸವಾಲುಃ ವಾದಿ ಪರ ಶ್ರೀ ವಕೀಲರಿಂದಃ**

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**